ಜಿಲ್ಲೆಯಲ್ಲಿ ಆಗಸ್ಟ್ ಅಂತ್ಯದವರೆಗೆ 10.08 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಜಾನುವಾರು ಮೇವು ಸರಬರಾಜು ಮಾಡಲಾಗಿದೆ.

ಉದ್ಯೋಗ ಸುಜನೆಯಡಿಯಲ್ಲಿ ಸಿ.ಆರ್.ಎಫ್. ನಿಧಿಯಿಂದ ಸಿಂಧನೂರು ತಾಲ್ಲೂಕಿಗೆ 12.50 ಲಕ್ಷ ರೂಪಾಯಿಗಳು ಬಿಡುಗಡೆ ಮಾಡಿದ್ದು, ಆರ್‌ಡಿಪಿಆರ್ ಇಲಾಖೆ ವತಿಯಿಂದ 1148 ಕಾಮಗಾರಿಗಳನ್ನು ರೂಪಾಯಿ 335.14 ಲಕ್ಷ ರೂಪಾಯಿಗಳನ್ನು ಸಹ ಒದಗಿಸಿ ಕೈಗೆತ್ತಿಕೊಂಡು 88 ಕಾಮಗಾರಿಗಳನ್ನು ಪೂರ್ಣಗೊಳಿಸಿ 211.49 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ 3.10 ಲಕ್ಷ ಮಾನವ ದಿನಗಳನ್ನು ಉತ್ಪಾದಿಸಲಾಗಿದೆ.

ಕೊಪ್ಪಳ ತಾಲ್ಲೂಕಿನಲ್ಲಿ 21 ಕುಡಿಯುವ ನೀರಿನ ಕಾಮಗಾರಿಗಳು ಮತ್ತು ಉದ್ಯೋಗ ದೃಢೀಕರಣ ಯೋಜನೆಯಲ್ಲಿ 175 ಕಾಮಗಾರಿಗಳನ್ನು ಕೈಗೊತ್ತಿಕೊಂಡು, 4 ಕಾಮಗಾರಿ ಪೂರ್ಣ ಗೊಂಡು, 13.73 ಲಕ್ಷ ವೆಚ್ಚಮಾಡಲಾಗಿದೆ.

ರಾಜ್ಯದ ಯಾವುದೇ ತಾಲ್ಲೂಕನ್ನು ಬರಗಾಲ ಪೀಡಿತವೆಂದು ಘೋಷಣೆ ಮಾಡಲು ಅವಕಾಶವಿಲ್ಲದ್ದರಿಂದ ಕೊಪ್ಪಳ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡಿದ್ದು ಆಗಸ್ಟ್ ಅಂತ್ಯದವರೆಗೆ ಅವರಲ್ಲಿ ಇನ್ನು 212.70 ಲಕ್ಷ ಹಣ ಲಭ್ಯವಿದೆ. ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಸರ್ಕಾರವು ಮಿಸುಮಾನ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಪರಿವೀಕ್ಷಿಸುತ್ತದೆ.

4) ಮುಶಿಗೇರಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಅಭಾವ.

ಶ್ರೀ ಶೈಲಪ್ಪ ಬಿದನೂರು (ರೋಣ) :- ಮಾನ್ಯ ಉಪಾಧ್ಯಕ್ಷರೇ, ಮುಶಿಗೇರಿ ಗ್ರಾಮದ ಸುತ್ತ ಮುತ್ತಲಿನ ಸುಮಾರು 10-15 ಗ್ರಾಮಗಳಲ್ಲಿ ವಿದ್ಯುತ್ತ ಲೋ ವೋಲ್ಟೇಜಿನಿಂದ ತೀವ್ರ ತರಹದ ತೊಂದರೆ ಆಗಿದೆ. ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? ಮುಶಿಗೇರಿ ಗ್ರಾಮದಲ್ಲಿ 33 ಕೆ. ವಿ ಸ್ಟೇಷನ್ ಸ್ಥಾಪಿಸುವ ವಿಚಾರ ಸರ್ಕಾರಕ್ಕೆ ಇದೆಯೇ ಎಂಬ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಮಾನ್ಯ ಉಪಮುಖ್ಯಮಂತ್ರಿಗಳ ಪರವಾಗಿ ನಾನು ಈ ಕೆಳಕಂಡು ಹೇಳಿಕೆಯನ್ನು ಮಾಡುತ್ತೇನೆ.

ಮುಶಿಗೇರಿ ಮತ್ತು ಆದರ ಸುತ್ತಮುತ್ತಲಿನ ಗ್ರಾಮಗಳಿಗೆ ಗಜೇಂದ್ರಘಡದಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ 11 ಕೆ.ವಿ., ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಗಜೇಂದ್ರಘಡ ಮತ್ತು ನರೇಗಲ್‌ಗಳಲ್ಲಿರುವ ವಿದ್ಯುತ್ ಉಪ ಕೇಂದ್ರಗಳಲ್ಲಿ ಸ್ವಲ್ಪ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ರೋಣ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಉಂಟಾಗಿರುವ ಕಡಿಮೆ ವೋಲ್ಟೇಜ್ ಪರಿಸ್ಥಿತಿಗೆ ಇದೂ ಒಂದು ಮುಖ್ಯ ಕಾರಣ ವಾಗಿದೆ. ಗದಗ್ ಮತ್ತು ರೋಣ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ, ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಸಾಲ ಸೌಲಭ್ಯದೊಡನೆ ಗದಗ್‌ನಲ್ಲಿ ಒಂದು 220 ಕೆ.ವಿ.,

ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಲಾಗುವುದು. ಅಲ್ಲದೇ ಪವರ್ ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಯ ಸಾಲ ಸೌಲಭ್ಯದೊಡನೆ ಗಜೇಂದ್ರಗಡದಲ್ಲಿ ಒಂದು 110 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ.

ಮುಶಿಗೇರಿಯ 11 ಕೆ.ವಿ. ಫೀಡರ್‌ಗೆ ಅಳವಡಿಸಲಾಗಿರುವ 300 ಕೆ.ವಿ.ಎ.ಆರ್., ಕೆಪಾಸಿಟರ್ ಬ್ಯಾಂಕ್ ವಿಫಲಗೊಂಡಿದೆ. ಇದನ್ನು ಹೊಸ ಕೆಪಾಸಿಟರ್ ಬ್ಯಾಂಕ್ ಮೂಲಕ ಬದಲಾಯಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಮಂಡಳಿಯು ರೋಣ ತಾಲ್ಲೂಕಿನ ಹಿರೇಹಾಳದಲ್ಲಿ ಸುಮಾರು 135 ಲಕ್ಷ ರೂ. ಅಂದಾಜು ವೆಚ್ಚದಲ್ಲಿ, ಒಂದು 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕಾಗಿ ಪ್ರಸಕ್ತಸಾಲಿನ (1995-96) ಆಯವ್ಯಯದಲ್ಲಿ 70 ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಮುಶಿಗೇರಿ ಗ್ರಾಮವು ಹಿರೇಹಾಳದಿಂದ ಸುಮಾರು 10 ಕಿ.ಮೀ. ದೂರದಲ್ಲಿರುವುದರಿಂದ, ಈ ಉದ್ದೇಶಿತ ಹಿರೇಹುಳ ವಿದ್ಯುತ್ ಉಪ ಕೇಂದ್ರದಿಂದ ಒಂದು 11 ಕೆ. ವಿ., ಎಕ್ಸಪ್ರೆಸ್ ಫೀಡರನ್ನು ಮುಶಿಗೇರಿ ಗ್ರಾಮಕ್ಕೆ ನಿರ್ಮಾಣ ಮಾಡಿ, ಮುಶಿಗೇರಿ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನ ವೋಲ್ಟೇಜನ್ನು ಉತ್ತಮ ಪಡಿಸಬಹುದಾಗಿದೆ. ಅದಗ್ಗೂ, ಮುಶಿಗೇರಿಯಲ್ಲಿ ಒಂದು 33 ಕೆ.ವಿ., ವಿದ್ಯುತ್ ಸ್ಟೇಷನನ್ನು ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆಯು ಇತ್ತೀಚೆಗಷ್ಟೆ ಬಂದಿದ್ದು, ಈ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಗುತ್ತಿದೆ.

(5) ಹೊಸದುರ್ಗ ತಾಲ್ಲೂಕಿನಲ್ಲಿ ಸ್ಥಾಪನೆ ಆಗಿರುವ ಐದು ಮಿನಿ ಸಿಮೆಂಟ್ ಕಾರ್ಖಾನೆ ಕುರಿತು.

ಶ್ರೀ ಟಿ. ಎಚ್. ಬಸವರಾಜ್ (ಹೊಸದುರ್ಗ) :- ಮಾನ್ಯ ಉಪಾಧ್ಯಕ್ಷರೇ, ಹೊಸದುರ್ಗ ತಾಲ್ಲೂಕಿನಲ್ಲಿ ಸ್ಥಾಪನೆ ಆಗಿರುವ ಸೇವಾ ಸಿಮೆಂಟ್ ಕಾರ್ಖಾನೆ, ಶಿವಶಕ್ತಿ ಸಿಮೆಂಟ್ಸ್, ಎಂ.ಎಸ್ ರಾಮಯ್ಯ ಇವರ ಮೈಸೂರು ಮಿನರಲ್ಸ್, ಲಕ್ಷ್ಮಿ ಸಿಮೆಂಟ್ಸ್ ಕಾರ್ಖಾನೆಗಳು ಇದ್ದು ಸ್ಥಳೀಯ ರೈತರಿಗೂ ಮಾಲೀಕರಿಗೂ ಆಗಿರುವ ಕರಾರು ಪ್ರಕಾರ ಪ್ರತಿ ವರ್ಷ ಸಂಬಂಧಪಟ್ಟ ಪಂಚಾಯತಿಗಳಿಗೆ ಇಂತಿಷ್ಟು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ವಂತಿಕೆ ಕೊಡಲು ಒಪ್ಪಿ, ಕಾರ್ಖಾನೆ ಮಾಲೀಕರು ಕರಾರಿಗೆ ವಿರುದ್ಧವಾಗಿ ವರ್ತಿಸಿದ್ದು ಈ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡು ತಾಲ್ಲೂಕಿನಲ್ಲಿ ಈ ವರ್ಷ ಬರದ ಛಾಯೆ ಇದ್ದ ಕಾರಣ ಪರಿಹಾರ ಕಾರ್ಯಕ್ಕೆ ಹಣ ಕೊಡಿಸಲು ತಪ್ಪಿದರೆ ಅವರ ಪರವಾನಗಿಯನ್ನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಉಪಾಧ್ಯಕ್ಷರೇ, 1988-89 ನೇ ಇಸವಿಯಲ್ಲಿ ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಏನು ಐದು ಮಿನಿ ಸಿಮೆಂಟ್ ಕಾರ್ಖಾನೆ ಗಳಿದ್ದವು, ಅವುಗಳ ಬಗ್ಗೆ ಒಂದು ಸಭೆ ನಡೆದು ಅವರು ಅಲ್ಲಿ ಆ ಭಾಗದ ಅಭಿವೃದ್ಧಿ ಸಲುವಾಗಿ ಈ ಬೆಟರ್‌ಮೆಂಟ್ ಲೆವಿ ಕೊಡಬೇಕೆಂದು ತೀರ್ಮಾನವಾಗಿದ್ದು ನಿಜ. ಆದರ ನಂತರ ಎರಡು-ಮೂರು ವರ್ಷ ಅವರು ಆ ಬೆಟರ್‌ಮೆಂಟ್ ಲೆವಿಯನ್ನು ಕೊಟ್ಟರು. ಈಗ ಆ ಕೈಗಾರಿಕೆಗಳು ಅನಾರೋಗ್ಯವಾಗಿವೆ. They are under B.I.F.R. ಹಾಗಾಗಿ ಅದರಲ್ಲಿ ಮೂರು